**ಸಾಕ್ಷಿಯನ್ನು ದಿಃ 25.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಈಗಾಗಲೇ ದಿಃ 14.10.2024 ರಂದು ತಿಳಿಸಿರುತ್ತಾರೆ.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಏಕಪಕ್ಷೀಯಃ**

**ಪಾಟೀ ಸವಾಲುಃ 1, 2, 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಎನ್ ಎನ್ ವಕೀಲರಿಂದಃ-**

ನಾನು ಬಿ.ಎ ಪದವೀಧರ. ನನಗ ಕನ್ನಡ, ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಾನು ನ್ಯಾಯಾಲಯದ ಮುಂದೆ ನನ್ನ ತಾತ ರಾಮೇಗೌಡನ ಆರ್.ಡಿ ವಂಶವೃಕ್ಷವನ್ನು ಹಾಜರು ಪಡಿಸಿಲ್ಲ ಎಂದರೆ ವಂಶವೃಕ್ಷ ಹಾಜರು ಪಡಿಸಿರುತ್ತೇನೆ ಆದರೆ ಆರ್.ಡಿ ವಂಶವೃಕ್ಷವನ್ನು ಹಾಜರು ಪಡಿಸಿಲ್ಲ ಎನ್ನುತ್ತಾರೆ. ನಾನು ಹಾಜರು ಪಡಿರುವ ನಿಪಿ. 1 ವಂಶವೃಕ್ಷ ರಮೇಗೌಡನ ನಂತರದ ವಂಶವೃಕ್ಷ ಇರುತ್ತದೆ ಅದಕ್ಕೂ ಮೊದಲಿನ ವಂಶವೃಕ್ಷ ಹಾಜರು ಪಡಿಸಿಲ್ಲ ಎಂದರೆ ಸರಿ.ಆರ್.ಡಿ ವಂಶವೃಕ್ಷವನ್ನು ಹಾಜರು ಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ.

ದಾವಾ ಸ್ವತ್ತುಗಳೆಲ್ಲಾ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ಎಲ್ಲಾ ದಾಖಲೆಗಳಲ್ಲಿ ರಾಮೇಗೌಡ ಅಣ್ಣ ಚನ್ನೇಗೌಡ ಬಿನ್ ಚನ್ನೇಗೌಡ ರವರಿಗೆ ಕ್ರಯದ ಮೂಲಕ ಬಂದಿರುವ ಆಸ್ತಿಗಳು ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ.ನಿಪಿ. 17 ರ ಕೈ ಬರಹದ ಆರ್.ಟಿ.ಸಿಯಲ್ಲಿ ಕ್ರಯ ಎಂದು ನಮೂದು ಇದೆ ಎಂದರೆ ಸರಿ. ನಿಪಿ. 18 ರ ಕೈ ಬರಹದ ಆರ್.ಟಿ.ಸಿಯಲ್ಲಿ ಸರ್ವೆ ನಂ. 78/4 ರಲ್ಲಿ ಚನ್ನೇಗೌಡ ಬಿನ್ ಚನ್ನೇಗೌಡ ರವರಿಗೆ ಕ್ರಯ ಎಂದು ನಮೂದು ಇದೆ ಎಂದರೆ ಸರಿ. ನಿಪಿ. 20 ರ ಕೈ ಬರಹದ ಆರ್.ಟಿ.ಸಿಯಲ್ಲೂ ಸಹ ಚನ್ನೇಗೌಡ ಬಿನ್ ಚನ್ನೇಗೌಡ ರವರಿಗೆ ಕ್ರಯ ಎಂದು ನಮೂದು ಇದೆ ಎಂದರೆ ಸರಿ. ನಿಪಿ. 21 ರ ಕೈ ಬರಹದ ಆರ್.ಟಿ.ಸಿಯ ಸರ್ವೆ ನಂ. 78/23 ರಲ್ಲೂ ಸಹ ಚನ್ನೇಗೌಡ ಬಿನ್ ಚನ್ನೇಗೌಡ ರವರಿಗೆ ಕ್ರಯ ಎಂದು ನಮೂದು ಇದೆ ಎಂದರೆ ಸರಿ.

ವಾದ ಪತ್ರದ ಎ ಷಡ್ಯೂಲ್ ನ ಐಟಂ ನಂ. 1 ರಿಂದ 6 ಸ್ವತ್ತುಗಳಿಗೆ ಚಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿ. ಹಾಗೆ ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಬೇರೆ ದಾಖಲೆಗಳು ಕೊಟ್ಟಿದ್ದೇವೆ ಎನ್ನುತ್ತಾರೆ. ಏನು ದಾಖಲೆಗಳು ಕೊಟ್ಟಿದ್ದೇನೆ ಎಂದು ಈಗ ನೆನಪಿಲ್ಲ. ಎಲ್ಲಾ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿ ಪುನಃ ಜಮೀನುಗಳನ್ನು ಖಾಲಿ ಬಿಟ್ಟಿರುತ್ತಾರೆ, ಉಳಿಮೆ ಮಾಡಿಲ್ಲ ಎಂದು ನುಡಿದು ನಮಗೆ ಭಾಗ ಬೇಕು ಎಂದು ಕೇಳಿದ್ದೇವೆ ಎಂದು ನುಡಿಯುತ್ತಾರೆ. ನಿಪಿ. 29 ರಲ್ಲಿ ತೆಂಗು ಬೆಳೆ ಇದು ಎಂದು ನಮೂದು ಇದೆ ಎಂದರೆ ಸಾಕ್ಷಿ ಅದು ಮೊದಲಿನಿಂದಲೂ ಇದೆ ಎನ್ನುತ್ತಾರೆ. ಅದೆ ರೀತಿ ನಿಪಿ. 30 ರಲ್ಲೂ ತಂಬಾಕು ಮತ್ತು ತೆಂಗು ಇದೆ ಎಂದು ನಮೂದು ಇದೆ, ಅದ ರೀತಿ ನಿಪಿ. 21 ರಲ್ಲಿ ರಾಗಿ, ಅಧಿಕ ಇಳುವರಿ ಮತ್ತು ಅಡಿಕೆ ಬೆಳೆ ಇರುವ ಬಗ್ಗೆ ನಮೂದು ಇದೆ ಎಂದರೆ ಅಡಿಕೆ ಮೊದಲೆ ಇದೆ ಎನ್ನುತ್ತಾರೆ. ರಾಗಿಯನ್ನು ಯಾವಾಗ ಬೆಳೆಯುತ್ತಾರೆ ಆವಾಗ ಮಾತ್ರ ನಮೂದು ಮಾಡುತ್ತಾರೆ ಎಂದರೆ ಸಾಕ್ಷಿ ನನ್ನ ಪ್ರಕಾರ ಯಾವುದೆ ಬೆಳೆ ಇಲ್ಲ ಎನ್ನುತ್ತಾರೆ. ಅದೆ ವರ್ಷದಲ್ಲಿ ರಾಗಿ ಬೆಳೆದಿದ್ದರೂ ಬೆಳೆದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಪಿ. 21 ರಿಂದ 38 ಆರ್.ಟಿ.ಸಿಗಳು 2023-24 ನೆ ಸಾಲಿನವು ಎಂದರೆ ಸರಿ.

ನಿಪಿ. 33 ಆರ್.ಟಿ.ಸಿಯಲ್ಲಿ ತಂಬಾಕು ಬೆಳೆ ಎಂದು ನಮೂದು ಇದೆ ಎಂದರೆ ಸರಿ. ಎಲ್ಲಾ ಜಮೀನುಗಳಲ್ಲಿ ಪ್ರತಿವಾದಿಗಳು ವ್ಯವಸಾಯ ಮಾಡಿಕೊಂಡು ಬೆಳೆಯುತ್ತಿದ್ದರೂ ಖಾಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮೇಗೌಡ ಮತ್ತು ಚನ್ನೇಗೌಡ ಇಬ್ಬರೂ ಅಣ್ಣ ತಮ್ಮಂದಿರು ಅವರಿಬ್ಬರ ತಂದೆ ಹೆಸರು ಚನ್ನೇಗೌಡ. ಸದರಿ ಚನ್ನೇಗೌಡರ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೆ ಮೂಲ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೆ ದಾಖಲೆ ಕೊಡದಿದ್ದರೂ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಅನಾರೋಗ್ಯದಿಂದ ತೀರಿಕೊಂಡಿರುತ್ತಾರೆ. ಆಗ ನಾವಿಬ್ಬರೂ 4-5 ವರ್ಷದವರು ಇದ್ದೇವು. ನನ್ನ ತಾಯಿಯ ಮದುವೆಯನ್ನು ಚನ್ನೇಗೌಡ ಬಿನ್ ಚನ್ನೇಗೌಡ ರವರೇ ಮಾಡಿದ್ದರು ಎಂದರೆ ಸಾಕ್ಷಿ ನನ್ನ ತಾತ ರಾಮೇಗೌಡ ರವರು ಮಾಡಿದ್ದು ಎನ್ನುತ್ತಾರೆ. ನನ್ನ ತಾಯಿಯ ಮದುವೆಯನ್ನು ಚನ್ನೇಗೌಡ ರವರು ಮಾಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮದುವೆ ಯಾವ ಇಸವಿಯಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ನಮ್ಮ ತಾಯಿ ಮದುವೆ ಆಗುವ ಕಾಲಕ್ಕೆ ಅಜ್ಜಿ ತೀರಿಕೊಂಡಿದ್ದರು ಎಂದರೆ ಸರಿ. ನಮ್ಮ ಅಜ್ಜಿ ತೀರಿಕೂಂಡ ನಂತರ ನನ್ನ ತಾಯಿ, ಚಿಕ್ಕಮ್ಮ ಮತ್ತು ತಾತ ಎಲ್ಲರೂ ಚನ್ನೇಗೌಡ ರವರ ಆಶ್ರಯದಲ್ಲಿ ಇದ್ದರು ಎಂದರೆ ಸರಿಯಲ್ಲ. ತಾತ ರಾಮೇಗೌಡ ರವರು ಬೇರೆ ವಾಸವಾಗಿದ್ದರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದಿರಾ ಎಂದರೆ ಒಟ್ಟು ಕುಟುಂಬವಾದ ಕಾರಣ ಒಟ್ಟಿಗೆ ಇದ್ದರು ಎನ್ನುತ್ತಾರೆ. ರಾಮೇಗೌಡನ ಹೆಂಡತಿ ತೀರಿಕೊಂಡ ಕಾರಣ ಅವರನ್ನು ಮತ್ತು ಅವರ ಮಕ್ಕಳನ್ನು ಚನ್ನೇಗೌಡ ರವರೆ ನೋಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಮದುವೆಯ ಖರ್ಚನ್ನು ಚನ್ನೇಗೌಡ ಮತ್ತು ದೇವಿರಮ್ಮ ರವರೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಬೆಂಕಿಹಚ್ಚಿಕೂಂಡು ತೀರಿಕೊಂಡಿದ್ದು ಆ ಸಮಯದಲ್ಲಿ ಅವರು ಆಸ್ಪತ್ರೆಯಲ್ಲಿ ಇದ್ದಾಗ ಖರ್ಚವೆಚ್ಚವನ್ನು ಪ್ರತಿವಾದಿಗಳೆ ನೋಡಿಕೊಂಡಿದ್ದು ಎಂದರೆ ಸರಿಯಲ್ಲ.

ಐಟಂ ನಂ.1 ಸರ್ವೆ ನಂ. 4/2 ರಲ್ಲಿ 2 ಎಕರೆ 5 ಗುಂಟೆ ಜಮೀನಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಅದೆ ರೀತಿ ಐಟಂ ನಂ. 2 ರ ಸರ್ವೆ ನಂ. 5/1 ರಲ್ಲಿ 3 ಎಕರೆ 32 ಗುಂಟೆ ಜಮೀನಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಐಟಂ ನಂ. 3 ರ ಸರ್ವೆ ನಂ. 78/14 ರಲ್ಲಿ 2 ಎಕರೆ ಜಮೀನಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಐಟಂ . ನಂ. 4 ರ ಸರ್ವೆ ನಂ. 78/23 ರಲ್ಲಿ 20 ಗುಂಟೆ ಜಮೀನಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಐಟಂ . ನಂ. 5 78/7 ರಲ್ಲಿ 30 ಗುಂಟೆ ಜಮೀನಿನ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಅದೆ ರೀತಿ ಐಟಂ ನಂ. 6 ರ ಮನೆಯ ಖಾತಾ ನಂ. ಮತ್ತು ಚಕ್ಕುಬಂದಿ ಗೊತ್ತಿಲ್ಲ. ಐಟನಂ. ನಂ. 7 ಬ್ಯಾರನ್ ಮನೆಯ ಖಾತಾ ನಂಬರ್ ಮತ್ತು ಚಕ್ಕುಬಂದಿ ಹೇಳಲು ಆಗುವುದಿಲ್ಲ.

ಬಿ. ಷಡೂಲ್ ನ ಐಟಂ.ನಂ. 1 ಸರ್ವೆ ನಂ. 4/2 1 ಎಕರೆಗೆ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಐಟಂ ನಂ. 2 ಸರ್ವೆ ನಂ, 5/1 ರಲ್ಲಿ 2 ಎಕರೆಗೆ ,ಚಕ್ಕುಬಂದಿ ಹೇಳಲು ಆಗುವುದಿಲ್ಲ. ಐಟಂ.ನಂ. 78/14 ರಲ್ಲಿ 1 ಎಕರೆಗೆ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಅದೆ ರೀತಿ ಐಟಂ ನಂ. 4 ಮನೆಯ ಅಳತೆ ಮತ್ತು ಚಕ್ಕುಬಂದಿ ಹೇಳಲು ಆಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.